ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	80
2	ಸದಸ್ಯರ ಹೆಸರು	:	ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ .
3	ಉತ್ತರಿಸುವ ದಿನಾಂಕ	:	21-12-2018
4	ಉತ್ತರಿಸುವವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ರಾಜಕಾಲುವೆಯ ಒಟ್ಟು ಉದ್ದ ಎಷ್ಟು; (ವಲಯವಾರು ವಿವರ ನೀಡುವುದು)	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ರಾಜಕಾಲುವೆಗಳ ಒಟ್ಟು ಉದ್ದ 842.00 ಕಿ.ಮೀ ವಲಯವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.
ಆ)	ಈ ರಾಜಕಾಲುವೆಯನ್ನು ಒತ್ತುವರಿ ಮಾಡಿರುವ ಪ್ರಕರಣಗಳೆಷ್ಟು; ಇವುಗಳಲ್ಲಿ ಒತ್ತುವರಿಯನ್ನು ತೆರವುಗೊಳಿಸಿರುವ ಪ್ರಕರಣಗಳೆಷ್ಟು; ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳೆಷ್ಟು; ತೆರವುಗೊಳಿಸದೆ ಬಾಕಿ ಇರಲು ಕಾರಣಗಳೇನು; (ವಿವರ ನೀಡುವುದು)	ರಾಜಕಾಲುವೆಗೆ ಸಂಬಂಧಿಸಿದಂತೆ ಇದುವರೆಗೆ 2515 ಪ್ರಕರಣಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಒತ್ತುವರಿಯನ್ನು ತೆರವುಗೊಳಿಸಿರುವ ಪ್ರಕರಣಗಳ ಸಂಖ್ಯೆ: 428 ತೆರವುಗೊಳಿಸಲು ಸರ್ವೇ ಕಾರ್ಯ ಮುಗಿದು ಬಾಕಿ ಇರುವ ಪ್ರಕರಣಗಳ ಸಂಖ್ಯೆ: 450 ಮೊದಲ ಆಧ್ಯತೆಯ ಮೇಲೆ ಸರ್ವೇ ಕಾರ್ಯ ಕೈಗೆತ್ತಿಕೊಂಡಿರುವ ಪ್ರಕರಣಗಳ ಸಂಖ್ಯೆ: 259 ಎರಡನೇ ಆಧ್ಯತೆಯ ಮೇಲೆ ಸರ್ವೇ ಕಾರ್ಯ ಕೈಗೆತ್ತಿಕೊಂಡಿರುವ ಪ್ರಕರಣಗಳ ಸಂಖ್ಯೆ: 1378 ತೆರವುಗೊಳಿಸಲು ಬಾಕಿ ಇರುವ ಪ್ರಕರಣಗಳು 2087 ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ. ಬೆಂಗಳೂರು ಜಿಲ್ಲಾಡಳಿತ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಂಟಿಯಾಗಿ ಒತ್ತುವರಿ ಕಾರ್ಯಾಚರಣೆಯನ್ನು ಕೈಗೆತ್ತಿಕೊಂಡಿದ್ದು, ಬೆಂಗಳೂರು ನಗರವಾಗಿ ಪರಿವರ್ತನೆಯಾಗಿರುವ ಹಿನ್ನೆಲೆಯಲ್ಲಿ ಗ್ರಾಮ ನಕ್ಷೆಯ ಆಧಾರದಲ್ಲಿ ರಾಜಕಾಲುವೆಯ ಗಡಿಯನ್ನು ನಿಖರವಾಗಿ ಗುರುತಿಸಲು ಹೆಚ್ಚಿನ ಕಾಲಾವಕಾಶವು ಬೇಕಾಗುತ್ತಿರುವ ಕಾರಣ ಒತ್ತುವರಿ ತೆರವು ಬಾಕಿ ಇರುತ್ತದೆ. ಆದರೆ, 428 ಒತ್ತುವರಿ ಪ್ರಕರಣಗಳನ್ನು ಈಗಾಗಲೇ ತೆರವುಗೊಳಿಸಲಾಗಿದ್ದು, 2018-19 ಸಾಲಿನಲ್ಲಿ 450 ಪ್ರಕರಣಗಳ ಒತ್ತುವರಿಯನ್ನು ತೆರವುಗೊಳಿಸಲು ಉದ್ದೇಶಿಸಲಾಗಿದೆ. ಜೊತೆಯಲ್ಲಿ ಮೊದಲ ಆದ್ಯತೆಯ 259 ಪ್ರಕರಣಗಳನ್ನು ಸರ್ವೇ ಕಾರ್ಯವನ್ನು ಕೈಗೊಳ್ಳಲಾಗಿದೆ.
ಇ)	ಈ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರದ ಕ್ರಮಗಳೇನು? (ವಿವರ ನೀಡುವುದು)	ಒತ್ತುವರಿಯನ್ನು ತೆರವುಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪಟ್ಟಿಯನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದ್ದು, ಜಿಲ್ಲಾಧಿಕಾರಿಗಳು ಸರ್ವೆ ಕಾರ್ಯ ನಡೆಸಿ ವರದಿ ನೀಡುವಂತೆ ಜಂಟಿ ನಿರ್ದೇಶಕರು (ಭೂದಾಖಲೆಗಳು) ರವರ ನೇತೃತ್ವದಲ್ಲಿ ತಂಡವನ್ನು ರಚಿಸಿರುತ್ತಾರೆ. ಅದರಂತೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಸಮನ್ವಯ ಸಮಿತಿ ಸಭೆಯಲ್ಲಿ ಈ ಸಂಬಂಧ ಪ್ರಗತಿಯ ಪರಿಶೀಲನೆ ನಡೆಸಲಾಗುತ್ತಿದ್ದು, ಸರ್ವೆ ವರದಿ ಸಂಪೂರ್ಣಗೊಂಡ ಕೂಡಲೇ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 659 ಎಂಎನ್‌ಯು 2018

(ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿಗಳು

ಅನುಬಂಧ-1

ಅನುಬಂಧ-1

ಬೃಹತ್ ಮಳೆ ನೀರುಗಾಲುವೆಗಳ ವಿವರಗಳು

ಕೋರ್ ಪ್ರದೇಶ (Core Area)

ಕ್ರ. ಸಂ.	ಕಣಿವೆ / ವಲಯ	ಕಾಲುವೆಗಳ ಸಂಖ್ಯೆ	ಪ್ರಾಥಮಿಕ ಮಳೆ ನೀರು ಗಾಲುವೆಯ ಉದ್ದ ಕಿ.ಮೀ ಗಳಲ್ಲಿ	ಸೆಕೆಂಡರಿ ಮಳೆ ನೀರು ಕಾಲುವೆಯ ಉದ್ದ ಕಿ.ಮೀ ಗಳಲ್ಲಿ	ಒಟ್ಟು ಕಾಲುವೆಯ ಉದ್ದ ಕಿ.ಮೀ ಗಳಲ್ಲಿ
1.	ವೃಷಭಾವತಿ ಕಣಿವೆ	34	32.50	57.50	90.00
2.	ಕೋರಮಂಗಲ ಕಣಿವೆ	25	23.50	47.50	71.00
3.	ಚಲಘಟ್ಟ ಕಣಿವೆ	12	16.50	16.50	33.00
4.	ಹೆಬ್ಬಾಳ ಕಣಿವೆ	24	26.00	26.00	52.00
	ಒಟ್ಟು (ಅ)	95	98.50	147.50	246.00

ಹೊರವಲಯ ಪ್ರದೇಶ (Outer CMC)

ಕ್ರ. ಸಂ.	ವಲಯ	ಕಾಲುವೆಗಳ ಸಂಖ್ಯೆ	ಪ್ರಾಥಮಿಕ ಮಳೆ ನೀರು ಗಾಲುವೆಯ ಉದ್ದ ಕಿ.ಮೀ ಗಳಲ್ಲಿ	ಸೆಕೆಂಡರಿ ಮಳೆ ನೀರು ಕಾಲುವೆಯ ಉದ್ದ ಕಿ.ಮೀ ಗಳಲ್ಲಿ	ಒಟ್ಟು ಕಾಲುವೆಯ ಉದ್ದ ಕಿ.ಮೀ ಗಳಲ್ಲಿ
1.	ರಾಜರಾಜೇಶ್ವರಿ ನಗರ	94	78.00	62.00	140.00
2.	ದಾಸರಹಳ್ಳಿ	69	43.00	44.00	87.00
3.	ಯಲಹಂಕ	68	38.00	41.00	79.00
4.	ಮಹದೇವಪುರ	188	98.00	80.00	178.00
5.	ಬೊಮ್ಮನಹಳ್ಳಿ	119	60.00	52.00	112.00
	ಒಟ್ಟು (ಆ)	538	317.00	279.00	596.00
	ಒಟ್ಟು (ಅ+ಆ)	633	415.50	426.50	842.00

Chief Engineer
Storm Water Drain
Bruhat Bangalore Mahanagara Palike

ಅನುಬಂಧ-2

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ — ಅನುಬಂಧ-2

ಬೃಹತ್ ಮಳೆನೀರುಗಾಲುವೆಯ ಒತ್ತುವರಿ ವಿವರಗಳು

ಕ್ರ.ಸಂ	ವಲಯ	I. ಈ ಹಿಂದೆ 2016-17ರ ಸಾಲಿನಲ್ಲಿ ಸರ್ವೆ ಮಾಡಿ ತೆರವು ಕಾರ್ಯಾಚರಣೆ ಕೈಗೊಂಡಿರುವ ವಿವರ	II. ಈ ಹಿಂದೆ ಸರ್ವೆ ಕಾರ್ಯಕೈಗೊಂಡು ತೆರವು ಕಾರ್ಯಾಚರಣೆ ಕೈಗೊಳ್ಳಬೇಕಾಗಿರುವ ವಿವರ	III. ಆದ್ಯತೆಯ ಮೇರೆಗೆ (ಪ್ರವಾಹ ಹಾನಿಯನ್ನು ತಪ್ಪಿಸುವ ಸಲುವಾಗಿ) ಸರ್ವೆ ಕಾರ್ಯಕೈಗೊಳ್ಳಬೇಕಾಗಿರುವ ವಿವರ	IV. ಉಳಿದ ತೆರವು ಕಾರ್ಯಾಚರಣೆ ಕೈಗೊಳ್ಳಲು ಸರ್ವೆ ಕಾರ್ಯಕೈಗೊಳ್ಳಬೇಕಾಗಿರುವ ವಿವರಗಳು	ಷರಾ
1	ಪೂರ್ವ	3	0	4	230	
2	ಪಶ್ಚಿಮ	11	0	0	60	
3	ದಕ್ಷಿಣ	0	20	0	0	
4	ಕೋರಮಂಗಲ	7	0	0	3	
5	ಯಲಹಂಕ	215	202	67	104	
6	ಮಹದೇವಪುರ	98	226	58	719	
7	ಬೊಮ್ಮನಹಳ್ಳಿ	40	0	89	147	
8	ರಾಜರಾಜೇಶ್ವರಿ ನಗರ	38	2	7	0	
9	ದಾಸರಹಳ್ಳಿ	16	0	34	115	
	ಒಟ್ಟು	428	450	259	1378	

ಮುಖ್ಯ ಅಭಿಯಂತರರು,
ಬೃ.ನೀ.ಗಾ. ಬಬಿಎಂಪಿ